ಶ್ರೀ ಜ್ಞಾನದೇವ ಎಸ್. ದೊಡ್ಡಮೇಟಿ.— ಈ ಗ್ರಾಮಕ್ಕೆ ಪಕ್ಕದಲ್ಲಿ ರಾಜೂರು ಎಂಬ ಗ್ರಾಮವಿದ್ದು ಅಲ್ಲಿ ನೀರು ಸರಬರಾಜು ಯೋಜನೆಯಲ್ಲಿ ಕೆಇಬಿಯವರು ಪವರ್ ಸಪ್ಲೈ ಮಾಡದೆ ಆತಂಕವಾಗಿದೆ. ಇದಕ್ಕೆ ಸ್ಪಷ್ಟ ನಿರ್ದೇಶನವನ್ನು ಕೆಇಬಿಗೆ ನೀಡಬೇಕೆಂದು ಕೋರುತ್ತೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್.— ಕೆಲವು ಸಾಮಗ್ರಿಗಳ ಖರೀದಿ ಅನೇಕ ಕಡೆ ಕೆಇಬಿಯಿಂದ ಆಗಿಲ್ಲ. ಅದಕ್ಕೂ ಹೀಗೆ ಆಗಿರಬಹುದು. ಆದ್ಯತೆ ಮೇರೆಗೆ ಕಂಡಿಯುವ ನೀರಿನ ಸಪ್ಲೈಗೆ ಪವರ್ ಸಪ್ಲೈ ಕೊಡಿ ಎಂದು ಅಧಿಕಾರಿಗಳ ಮೂಲಕ ಆದೇಶ ಕೊಡುತ್ತೇನೆ.

ಮೈಸೂರು ಪ್ರಾಧಿಕಾರವನ್ನು ರಚಿಸುವ ಬಗ್ಗೆ

೫೧೩. ಶ್ರೀ ಎಂ. ಶಿವಣ್ಣ (ಹೆಗ್ಗಡದೇವನಕೋಟೆ).— ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು, ಆಹಾರ ಹಾಗೂ ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೈಸೂರು ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಲು ಸರಕಾರದವರು ಯೋಜಿಸಿದ್ದಾರೆಯೆ, ಹಾಗಿದ್ದಲ್ಲಿ ಯಾವಾಗ ರಚಿಸಲಾಗುವುದು ?

ಆ) ಮೈಸೂರು ನಗರಾಭಿವೃದ್ಧಿ ಮಂಡಳಿಯು ೧೯೮೩ರಿಂದ ಇದುವರೆವಿಗೆ ನಿವೇಶನಕ್ಕಾಗಿ ಎಷ್ಟು ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದೆ ಹಾಗೂ ಎಷ್ಟು ಸಂಘ ಸಂಸ್ಥೆಗಳಿಗೆ ಭೂಮಿ ನೀಡಿದೆ ?

ಇ) ಹಂಚಲಾಗಿರುವ ನಿವೇಶನಗಳೆಷ್ಟು ಹಾಗೂ ಮನೆಗಳು ಎಷ್ಟು ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ನ್ಯಾಯ ಮತ್ತು ಸಂಸದೀಯ ವ್ಯವಹಾರ, ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು).—

ಅ) ಇದೇ ಅಧಿವೇಶನದಲ್ಲಿ ಈ ಬಗ್ಗೆ ಒಂದು ಕರಡು ಮಸೂದೆಯನ್ನು ಮಂಡಿಸಿದೆ. ಅದು ಜಾರಿಗೆ ಬಂದ ಮೇಲೆ ಪರಿಶೀಲಿಸಲಾಗುವುದು.

ಆ) ೧೩೬೬.೨೭ ಎಕರೆ ಜಮೀನನ್ನು ದಿನಾಂಕ ೧-೧-೧೯೮೩ರಿಂದ ೩೧-೧೨-೧೯೮೭ರವರೆಗೆ ಸ್ವಾಧೀನ ಪಡಿಸಿಕೊಂಡಿರುತ್ತೆ. ೬೬೪.೩೧ ಎಕರೆಯಷ್ಟು ಸಂಘ ಸಂಸ್ಥೆಗಳಿಗೆ ಮಂಜೂರು ಮಾಡಿರುತ್ತೆ.

ಇ) ೯೯೭೭ ನಿವೇಶನಗಳನ್ನು ಮತ್ತು ೭೩ ಮನೆಗಳನ್ನು ಮಂಜೂರು ಮಾಡಿರುತ್ತದೆ.

ಶ್ರೀ ಎಂ ಶಿವಣ್ಣ.— ಸಂಘ ಸಂಸ್ಥೆಗಳಿಗೆ ಮೈಸೂರು ನಗರಾಭಿವೃದ್ಧಿ ಮಂಡಲಿಯವರು ಭೂಮಿಯನ್ನು ನೀಡಲಾಗಿದೆಯೆಂದು ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ ಅವು ಯಾವ್ಯಾವ ಸಂಘ ಸಂಸ್ಥೆಗಳು ಎನ್ನುವುದನ್ನು ಹೇಳಬೇಕು ಹಾಗೂ ೧೯೮೩ರಿಂದ ನೀಡಿರುವ ನಿವೇಶನ ಮನೆಗಳಲ್ಲಿ, ಪರಿಶಿಷ್ಟ ಜಾತಿ, ವರ್ಗದವರಿಗೆ ಎಷ್ಟು ಹಂಚಿದ್ದೀರಿ, ಅಂಗವಿಕಲರಿಗೆ ಎಷ್ಟು ಹಂಚಿದ್ದೀರಿ ಎನ್ನುವುದನ್ನು ತಿಳಿಸಬೇಕು. ಮನೆಗಳು ಮತ್ತು ನಿವೇಶನಗಳನ್ನು ವಿತರಣೆ ಮಾಡಬೇಕಾದರೆ ಮೈಸೂರಿನಲ್ಲಾಗಲೀ, ಬೆಂಗಳೂರಿನಲ್ಲಾಗಲೀ ಇಲ್ಲವೇ ಯಾವುದೇ ನಗರ ಪ್ರದೇಶಗಳಲ್ಲಾಗಲೀ ಲಾಟರಿ ಮುಖಾಂತರವಾಗಿ ಹಂಚಿಕೆಯಾಗುವುದರಿಂದ ಬಡವರಿಗೆ ಅನ್ಯಾಯವಾಗಿದೆಯೆಂದು ಸರಕಾರಕ್ಕೆ ಗೊತ್ತಿದೆಯೇ, ಗೊತ್ತಿದ್ದರೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ಮಾನ್ಯ ಮಂತ್ರಿಗಳು ದಯವಿಟ್ಟು ತಿಳಿಸಬೇಕು.

ಶ್ರೀ ಎ. ಲಕ್ಷ್ಮೀಸಾಗರ್.— ಸನ್ಮಾನ್ಯ ಸದಸ್ಯರು ಸಂಘ ಸಂಸ್ಥೆಗಳ ಪಟ್ಟಿಯನ್ನು ಕೇಳಿದ್ದಾರೆ. ಅದರ ಮಾಹಿತಿ ನನ್ನ ಹತ್ತಿರ ಇಲ್ಲ ಅದನ್ನು ತರಿಸಿಕೊಡುತ್ತೇನೆ. ಹರಿಜನ ಗಿರಿ ಜನರಿಗೆ. ಹಿಂದುಳಿದ ವರ್ಗದವರಿಗೆ ನೀಡಬೇಕಾದ ಮೀಸಲಾತಿ ಬಗ್ಗೆ ಕೇಳಿದ್ದಾರೆ, ಇದಕ್ಕಾಗಿ ಒಂದು ನಿಯಮವನ್ನು ಮಾಡಿದ್ದೇವೆ, ಅದರ ಪ್ರಕಾರ ನಿವೇಶನಗಳನ್ನು, ಮನೆಗಳನ್ನು ಹಂಚುತ್ತೇವೆ. ಎಲ್ಲಿಯಾದರೂ ಇವರಿಗೆ ತೊಂದರೆಯಾಗಿದ್ದರೆ ಇಂತಹ ಕಡೆಯಲ್ಲಿ ತೊಂದರೆಯಾಗಿದೆ ನ್ಯಾಯ ದೊರಕಿಲ್ಲವೆಂದು ಸನ್ಮಾನ್ಯ ಸದಸ್ಯರು ನಮ್ಮ ಗಮನಕ್ಕೆ ತಂದರೆ ಅದನ್ನು ಸರಿಪಡಿಸತಕ್ಕಂತಹ ಕ್ರಮವನ್ನು ಕೈಗೊಳ್ಳುತ್ತೇನೆ.

ಶ್ರೀ ಎಂ. ಶಿವಣ್ಣ — ಲಾಟರಿ ಮೂಲಕವಾಗಿ ಸೈಟ್ ಮತ್ತು ಮನೆಯನ್ನು ವಿತರಣೆ ಮಾಡತಕ್ಕಂತಹ ಸಂದರ್ಭದಲ್ಲಿ ಬಡವನಾಗಿರುವವನು ಅರ್ಜಿ ಹಾಕಿದ್ದರೂ ಅವನಿಗೆ ಮನೆ ಸಿಗುವುದಿಲ್ಲ ಉಳ್ಳಂತಹವರು ೫-೧೦ ಸೈಟುಗಳಿಗೆ ಬೇರೆ ಬೇರೆ ಸ್ಥಳಗಳಲ್ಲಿ ಹಾಕಿಕೊಂಡಿದ್ದು. ಸಿಕ್ಕಿದಂತಹವರಿಗೇ

ಮತ್ತೆ ಸೈಟು ಸಿಕ್ಕುತ್ತದೆ, ಬಡವನಾಗಿರುವವನಿಗೆ ಸಿಕ್ಕುವುದಿಲ್ಲ. ಯಾರು ನಿವೇಶನಕ್ಕೆ ಮೊದಲೇ ಅರ್ಜಿ ಹಾಕಿಕೊಂಡಿರುತ್ತಾರೆ ಎಂದರೆ ಸೀನಿಯಾರಿಟಿ ಮೇಲೆ ಕೊಡತಕ್ಕಂತಹ ಪದ್ಧತಿ ಇಟ್ಟುಕೊಂಡರೆ ಸೂಕ್ತವೆಂದು ನನ್ನ ಭಾವನೆಯಾಗಿದೆ. ಮಾನ್ಯ ಮಂತ್ರಿಗಳು ಈ ಬಗ್ಗೆ ಯೋಚನೆ ಮಾಡಿ ಏನಾದರೂ ಸೂಕ್ತವಾದ ವ್ಯವಸ್ಥೆಯನ್ನು ಮಾಡಬೇಕೆಂದು ವಿನಂತಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.— ಯಾವ ಒಂದು ತೊಂದರೆಯನ್ನು ಸನ್ಮಾನ್ಯ ಸದಸ್ಯರು ಹಣವಂತರು, ಉಳ್ಳವರು ಬೇರೆ ಬೇರೆ ಹೆಸರಿನಲ್ಲಿ, ಬೇರೆ ಬೇರೆ ಕಡೆಗಳಲ್ಲಿ ಅರ್ಜಿಗಳನ್ನು ಹಾಕಿ ಸೈಟುಗಳನ್ನು ಪಡೆಯುತ್ತಾರೆಂದು ಹೇಳಿದರೂ ಅದೇ ರೀತಿ ಲಾಟರಿ ಒಳಗೂ ಮಾಡಬಹುದು. ಈ ತೊಂದರೆ ಎರಡೂ ಕಡೆ ಇಲ್ಲವೆಂದು ಹೇಳುವುದಿಲ್ಲ. ಯಾರು ಎಲಿಜಿಬಲ್ ಕ್ಯಾಂಡಿಡೇಟ್ಸ್ ಇದ್ದಾರೆ ಅವರಿಂದ ಅರ್ಜಿ ತೆಗೆದುಕೊಳ್ಳುತ್ತೇವೆ. ಈ ಮೊದಲು ನಾನು ಹೌಸಿಂಗ್ ಮಿನಿಸ್ಟರ್ ಆಗಿದ್ದಾಗ ನಮ್ಮ ರಾಜ್ಯದಲ್ಲಿ ಸುಮಾರು ಏಳೆಂಟು ಸಾವಿರ ಮನೆಗಳನ್ನು ಲಾಟರಿ ಮುಖಾಂತರವಾಗಿ ಹಂಚಿಕೆ ಮಾಡಿದೆ, ಆಗಲೂ ಇದೇ ರೀತಿಯ ಆಕ್ಷೇಪಣೆಗಳು ಬಂದವು ಅಂದರೆ ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ಹಂಚಿದೆ. ನಮಗೆ ಅನ್ಯಾಯವಾಗಿದೆಯೆಂದು ಒಂದು ಕಡೆಯಿಂದಲೂ ದೂರು ಬಂದಿಲ್ಲ. ಮನೆ ಸಿಕ್ಕದೇ ಇದ್ದವರೂ ಕೂಡ ನೀವು ಮಾಡಿದ್ದು ಚಲೋ ಇದೆ ಇದರಿಂದ ಯಾರಿಗೂ ಅನ್ಯಾಯವಾಗಿಲ್ಲವೆಂದು ಹೇಳಿದ್ದಾರೆ. ಮನುಷ್ಯ ಕೃತ್ಯವಾದಂತಹ ಯಾವ ಒಂದು ಯೋಜನೆಯಾದರೂ ಅದರಲ್ಲಿ ಲೋಪ ದೋಷ ಇದ್ದೇ ಇದೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಲೋಪ ದೋಷ ಕಡಿಮೆಯಿದೆಯೆನ್ನುವ ಕಾರಣಕ್ಕೋಸ್ಕರ ಇದನ್ನು ಮಾಡಿದ್ದೇವೆ. ಈ ಉಪಯೋಗವನ್ನು ಪಡೆದುಕೊಳ್ಳುವುದಕ್ಕೆ ಯಾರು ಅನರ್ಹರಿದ್ದಾರೆ ಎಂಬುದನ್ನು ಪ್ರತ್ಯೇಕವಾಗಿ ತಿಳಿಸಿದರೆ ಅದನ್ನು ಸರಿಪಡಿಸುವುದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎನ್. ಎಂ. ಅಡ್ಯಂತಾಯ.— ಮಂತ್ರಿಮಂಡಲವನ್ನು ಕೂಡ ಲಾಟರಿ ಪ್ರಕಾರ ಮಾಡಿದರೆ ಉತ್ತಮವೆಂದು ಕಾಣುತ್ತದೆ.

ಶ್ರೀ ಎಂ. ಶಿವಣ್ಣ.— ಇದರಿಂದ ಒಳ್ಳೆಯದಾಗಿದೆಯೆಂದು ಜನರು ಬಂದು ಹೇಳಿದ್ದಾರೆಂದು ಸನ್ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಎಲ್ಲಿ ಹೇಳಿದ್ದಾರೆ ಎಂಬುದನ್ನು ತಿಳಿಸಿದರೆ ಒಳ್ಳೆಯದು.

Civic Amenities to the Residents of Jaladharshini Layout

559. Smt. LEELADEVI R. PRASAD.—Will the Minister for law, Parliamentary Affairs, Urban Development, Food and Civil Supplies be pleased to state.

a) whether is it fact that the residents of Jaladharshini layout of Geddalahalli village Bangalore North Taluk, have deposited the required sum of money for providing them with the basic amenities like water supply, sewerage connection and formation of road ?

b) if so the amount deposited by them and when ?

c) when these facilities will be provided to them ?

Sri A. LAKSHMISAGAR (Minister for Law, Parliamentary Affairs, Food and Civil Supplies and Urban Development).---

a) No.

b) Jaladharshini layout of Geddalahalli also known as B. E. L. House Building Co-Operative Society layout is a Bangalore Development Authority, approved layout and the society has deposited Rs. 2,67,605 against a total demand of Rs, 4,50 lakhs as layout